ಶ್ರೀ ಸಿ. ಎನ್. ಪಾಟೀಲ್.—ಆದನ್ನು ವಿಚಾರ ಮಾಡುತ್ತೇನೆ ಎಂದು ನಾನು ಉತ್ತರ ಹೇಳಿದ್ದೇನೆ. ಅರಸೀಕೆರೆಯ ಕಮಿಟಿಯ ವ್ಯಾಪ್ತಿಯಲ್ಲಿರುವುದನ್ನು ಕಿತ್ತು ಹಾಸನಾ ಮಾರ್ಕೆಟಿಂಗ್ ಕಮಿಟಿ ವ್ಯಾಪ್ತಿಗೆ ಸೇರಿಸುತ್ತೇವೆ ಎಂದು ನಾನು ಹೇಳಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಪ್ರಶ್ನೆಗೆ ಸರ್ಕಾರದ ಕಡೆಯಿಂದ ಸ್ಪಷ್ಟವಾದ ಉತ್ತರ ಬರಲಿಲ್ಲ ಆದ್ದರಿಂದ ಈ ಪ್ರಶ್ನೆಯನ್ನು ತಡೆ ಹಿಡಿಯುವುದು ಒಳ್ಳೆಯದು.

ಅಧ್ಯಕ್ಷರು.—ಈಗಾಗಲೇ ಈ ಪ್ರಶ್ನೆಯ ಮೇಲೆ ೬ ನಿಮಿಷಗಳ ಕಾಲ ಚರ್ಚೆಯಾಗಿದೆ. ಆದ್ದರಿಂದ ಇದನ್ನು ಈಗ ತಡೆ ಹಿಡಿಯುವುದಕ್ಕಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ದೇಶದಲ್ಲಿ ಮಾರ್ಕೆಟ್ ಸೆಸ್ ಕೊಡುವವರು ಯಾರು ?

ಶ್ರೀ ಸಿ. ಎನ್. ಪಾಟೀಲ್.—ಸೆಸ್ ಕೊಡುವವರು ಕೊಂಡುಕೊಳ್ಳುವವರು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾರ್ಕೆಟಿಂಗ್ ಯಾರ್ಡಿಗೆ ಮಾಲನ್ನು ಮಾರಾಟ ಮಾಡುವುದಕ್ಕೆ ಒಂಡಿಯಲ್ಲಿ ಮಾಲನ್ನು ತುಂಬಿ ಕೊಂಡು ಬರತಕ್ಕ ರೈತ ಸೆಸ್ ಕೊಡುತ್ತಾನೆ ಅಲ್ಲವೇ ?

MADAM SPEAKER.—The hon Member may put a specific question.

ಶ್ರೀ ಎಂ. ನಂಜೇಗೌಡ.—ಹಾಸನ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಯಾರ್ಡಿಗೆ ಮಾಲನ್ನು ತರತಕ್ಕ ರೈತರಿಂದ ಯಾವ ತೆರಿಗೆಯನ್ನು ವಸೂಲು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎನ್. ಪಾಟೀಲ್.—ಅದಕ್ಕೆ ನೋಟೀಸ್ ಬೇಕು.

SRI D. DEVARAJ URS.—With the permission of the Chair, I wish t say this. Mr. Puttaswamy Gowda and others say that apart from this cess, there is another tax that is being collected from the farmers. That is their contention. The Hon. Minister has stated that there is no such thing and that the cess is collected from the buyer. The Hon. Member from Hassan says that in this area, there is market cess, being collected from the farmers. There is nothing like tax on the ryots.

SRI C. N. PATIL.—There is no other cess apart from Market cess.

SRI D. DEVARAJ URS.—What he meant to say was that apart from this cess, there is no other tax.

ಶ್ರೀ ಕೆ. ಎಚ್. ಹನುಮೇಗೌಡ.—ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿಯ ವ್ಯಾಪ್ತಿಗೆ ಸೇರದೆ ಇರುವಂತಹ ಗ್ರಾಮಾಂತರ ಪ್ರದೇಶಗಳ ಹಳ್ಳಿಗಳಲ್ಲಿರುವವರು ಹಾಸನದಲ್ಲಿ ವ್ಯಾಗನ್‌ಗಳನ್ನು ಬುಕ್ ಮಾಡಿ ಆಲೂಗಡ್ಡೆಯನ್ನು ಕಲ್ಕತ್ತಾ ಮತ್ತು ಅಹಮದಾಬಾದ್ ಇಂಥ ಪ್ರದೇಶಗಳಿಗೆ ಕಳುಹಿಸುತ್ತಾರೆ. ಅಂಥ ವರಿಂದ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಕಮಿಟಿಯವರು ದುಡ್ಡು ವಸೂಲು ಮಾಡುತ್ತಿದ್ದಾರೆ. ಇದು ನ್ಯಾಯವೇ ? ಇದು ಕಾನೂನು ಬದ್ಧವಾಗಿದೆಯೇ ?

ಶ್ರೀ ಸಿ. ಎನ್. ಪಾಟೀಲ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ವಿಚಾರಿಸುತ್ತೇನೆ.

SRI D. DEVARAJ URS.—With the permission of the Chair, I have got a submission. Mr. Sayanak quoted a circular dated 12th July 1974 That is a circular which has been printed in the Answer Book The date of the circular is printed here by mistake as 12th July 1974 It should be 12th July 1973.

Supply of Sandal Wood Oil to M/s. Gupta and Company Bombay

183. Sri S. M. Sheernaly Chandrasekhar (Hosanagar)

Will the Minister for Industies and Parliamentary Affairs be pleased to state:—

(*a*) whether there is any contract between M/s. Gupta and Company, Bombay and Government Sandal Wood Oil Factory, Shimoga to supply Sandal Wood Oil,

(*b*) if so, the date and the period of the contract,

(*c*) the names of all the signatories to the Contract.

(*d*) the terms and conditions of the Contract,

(*e*) whether there was a direct or *ad-hoc* supply of Sandal Oil from Government Sandal wood Oil Factory, Shimoga to M/s. Gupta and Company, Bombay with the approval of Joint Director, Government Sandal Wood Oil Factories, Bangalore,

(*f*) if so, the quantity of Sandal Wood Oil supplied on *ad-hoc* basis to M/s Gupta and Company, Bombay and the amount recovered by them to the Factory,

(*g*) whether it has been accounted,

(*h*) the reasons for giving priority to only M/s. Gupta and Company, when Sandal Wood Oil is not available to people of Karnataka ?

Sri S. M. Krishna.—Minister for Industries and Parliamentary Affairs.

(*a*) No.

(*b*) Does not arise in view of the reply to Clause (*a*) above.

(*c*) to (*h*) Do not arise.

ಶ್ರೀ ಎಸ್. ಎಂ. ಶೀತನಾಳಿ ಚಂದ್ರಶೇಖರ್.—ಸ್ವಾಮಿ ನಾನು ನನ್ನ ಪ್ರಶ್ನೆಯಲ್ಲಿ ಮುಂಬಯಿಯ ಮೆಸರ್ಸ್ ಗುಪ್ತ ಅಂಡ್ ಕಂಪೆನಿ ಹಾಗೂ ಶಿವಮೊಗ್ಗದಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಯ ನಡುವೆ ಗಂಧದ ಎಣ್ಣೆಯನ್ನು ಸರಬರಾಜು ಮಾಡುವ ಬಗ್ಗೆ ಒಪ್ಪಂದವೇನಾದರೂ ಇದೆಯೇ ಎಂದು ಕೇಳಿದ ಕ್ಕೆ ಇಲ್ಲ ವಂದು ಉತ್ತರ ಕೊಟ್ಟಿದ್ದೀರಿ, ಆಮೇಲೆ ಉಳಿದ ಪ್ರಶ್ನೆಗಳಿಗೂ ಕೂಡ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದೂ ಉತ್ತರವನ್ನು ಕೊಟ್ಟಿದ್ದೀರಿ. ಈ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ತಡೆ ಹಿಡಿಯಬೇಕೆಂದು ನಾನು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಸ್ಪಷ್ಟವಾಗಿ ಪ್ರಶ್ನೆಯೆನ್ನು ಕೇಳಿದರೆ ನಾವು ಸ್ಪಷ್ಟವಾದ ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ನಾನು ಪ್ರಶ್ನೆಯನ್ನು ಕೇಳಿರುವುದು ಸ್ಪಷ್ಟವಾಗಿದೆ ಮುಂಬಯಿಯ ಮೆಸರ್ಸ್ ಗುಪ್ತ ಅಂಡ್ ಕಂಪನಿ ಹಾಗೂ ಶಿವಮೊಗ್ಗದಲ್ಲಿರುವ ಸರ್ಕಾರಿ ಗಂಧದ ಎಣ್ಣೆಯನ್ನು ಸರಬರಿಾಜು ಮಾಡುವ ಬಗ್ಗೆ ಒಪ ಂದವೇನಾದರೂ ಇದೆಯೇ ! ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರವನ್ನು ಹೇಳಿದ್ದೀರಿ, ಆಮೇಲೆ ಬೆಂಗಳೂರಿನಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಗಳ ಸಂಯುಂಕ್ತ ಸಂಚಾಲಕರ ಅನುಮತಿಯೊಂದಿಗೆ ಶಿವಮೊಗ್ಗದಲ್ಲಿನ ಸರ್ಕಾರಿ ಗಂಧದ ಕಾರ್ಖಾನೆಯವರು ಮುಂಬಯಿ ಮೆಸರ್ಸ್ ಗುಪ್ತ ಅಂಡ್ ಕಂಪನಿಯವರಿಗೆ ಗಂಧದ ಎಣ್ಣೆಯನ್ನು ನೇರವಾಗಿ ಅಥವಾ ತತ್ಪೂರ್ವ ಆಧಾರದ ಮೇರೆಗೆ ಸರಬರಾಜು ಮಾಡಿದ್ದರೆ ಎಂದು ಕೇಳಿದ್ದಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರ ಮೊದಲನೆಯ ಪ್ರಶ್ನೆಗೂ ಅನಂತರ ಹಾಕಿರತಕ್ಕ ಪ್ರಶ್ನೆಗೂ ನಿಕಟ ಸಂಬಂಧ ಇದೆ. ಮೊದಲನೆಯ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದೆ. ಆದ್ದರಿಂದ ಬಾಕಿ ಪ್ರಶ್ನೆಗೂ ಅದು ಉದ್ಭವಿಸುವುದಿಲ್ಲ ಎಂದು ಹೇಳಿದೆ. ಮಾನ್ಯ ಸದಸ್ಯರು ತಮ್ಮ (ಉ) ಪ್ರಶ್ನೆಯಲ್ಲಿ ಸ್ಪಷ್ಟವಾಗಿ ಪ್ರಶ್ನೆಯನ್ನು ಕೇಳಿಲ್ಲ, ಅಸ್ಪಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕಾಗಿ ಇಲ್ಲ ಎಂದು ಉತ್ತರ ಹೇಳಿದೆ ಅಷ್ಟೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಒಪ್ಪಂದ ಅಥವಾ ಯಾವ ರೆಕಾರ್ಡ್ ಸಹ ಇಲ್ಲದೆ ಹೇರಳವಾಗಿ ಈ ಕಂಪನಿಯವರಿಗೆ ಗಂಧದ ಎಣ್ಣೆಯನ್ನು ಸಪ್ಲೈ ಮಾಡಿರುವುದು ತಮಗೆ ಗೊತ್ತಿದೆಯೇ ? ಗೊತ್ತಿದ್ದರೆ ಅದರ ಲೆಕ್ಕಪತ್ರದ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ದೆಹಲಿಯಲ್ಲಿರತಕ್ಕಂಥ ಗುಪ್ತ ಅಂಡ್ ಕಂಪನಿಯವರು ಈ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕಳೆದ ೪೦ ವರ್ಷಗಳಿಂದ ಏಜೆಂಟರಾಗಿದ್ದಾರೆ. ಅವರ ಜೊತೆಯಲ್ಲಿ ಒಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಆ ಒಪ್ಪಂದದ ಪ್ರಕಾರ ಆಯಾ ದಿವಸದ ಬೆಲೆಗೆ ಮತ್ತು ವರ್ಷ ಒಂದಕ್ಕೆ ಎಷ್ಟೋ ಒಂದು ಕ್ವಾಂಟಿಟಿಯನ್ನು ಕೊಡಬೇಕಾಗುತ್ತದೆ. ಆ ಒಂದು ಒಪ್ಪಂದದ ಹೊರಗೆ ಅಡ್-ಹಾಕ್ ಬೇಸಿಸ್ ಮೇಲೆ ಎಣ್ಣೆಯನ್ನು ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕಂಪನಿಯವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಯಾವಾಗ ಅದು ಎಷ್ಟು ಕಾಲದವರೆಗೆ ಊರ್ಜಿತವಾಗಿರುತದೆ ಮತ್ತು ಅವರಿಗೆ ಮಾತಾಟ ಮಾಡುವ ದರ ಯಾವುದು?

ಶ್ರೀ ಎಸ್. ಎಂ. ಕೃಷ್ಣ.—ಕಳೆದ ೪೦ ವರ್ಷಗಳಿಂದ ರಿನ್ಯೂ ಮಾಡಿಕೊಂಡು ಬರಲಾಗುತ್ತಿದೆ. ಈಗಲೂ ಅವರ ಒಪ್ಪಂದ ರಿನ್ಯೂ ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವಾಗ

ಶ್ರೀ ಎಸ್. ಎಂ. ಕೃಷ್ಣ.—ನಿಖರವಾಗಿ ಇಸವಿಯಲ್ಲಿ ಎರಡು ವರ್ಷದ ಮಟ್ಟಿಗೆ ಆಗಿದೆ. ದರದ ಬಗ್ಗೆ ಹೇಳಬೇಕೆಂದರೆ, ಯಾವೊತ್ತು ಎಣ್ಣೆ ಡಿಸ್‌ಪ್ಯಾಚ್ ಆಗುತ್ತದೆ ಆ. ಆ ದಿವಸದಲ್ಲಿ ಎಷ್ಟು ದರ ಇರುತ್ತದೋ ಅದರಂತೆ ಮಾರಲಾಗುತ್ತದೆ. ನಾವು ಒಪ್ಪಂದ ಮಾಡಿಕೊಂಡ ದಿವಸ ಕೆ.ಜಿ.ಗೆ ೨೫೦ ರೂಪಾಯಿಂಗಳಿದ್ದರೆ, ಇಂದು ಅದು ಕೆ ಜಿ.ಗೆ ೧೨೫೦ ರೂಪಾಯಿಗಳಿದೆ. ಒಪ್ಪಂದದ ಪ್ರಕಾರ ಇಂದಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ.

ಅಧ್ಯಕ್ಷರು.—ಈಗ ಪ್ರಶ್ನೋತರ ಕಾಲ ಮುಗಿಯಿತು.

Questions for Answers on the Day
(but not taken up)

Appoinimeni of Assessors

49. Sri A. V. Patil (Ron).—Will the Minister for Revenue be pleased to state,—

(*a*) whether there is a any rule for obtaining the assistance of the assessors in the cases conducted in the courts of the Charity Commissioner and Assistant Charity Commissioners.

(*b*) whether the Government thinks that opinon of assessors in such cases is necessary.

(*c*) whether there is any rule that the opinon of assessors is binding on the Commissioner.